**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 51/2017</u>**

ದಿನಾಂಕಃ 01.10.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 9 ಪ್ರಾಸಾ - 7

| | | |
|---|---|---|
| ಹೆಸರು | ಃ | ಜೋವರ್ ಪಾಷಾ |
| ತಂದೆಯ/ಗಂಡನ ಹೆಸರು | ಃ | ಭಾಷಾ ಸಾಬ್ |
| ವಯಸ್ಸು | ಃ | 51 ವರ್ಷ |
| ಉದ್ಯೋಗ | ಃ | ಅಕ್ಕಸಾಲಿಗ |
| ವಾಸಸ್ಥಳ | ಃ | ರಾಮನಗರ. |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದಿವರು 1 ನೇ ಆರೋಪಿ ಸಮೀರ್ ಎಂ.ಡಿ. ಅಲಿಯಾಸ್ ಸುಲ್ತಾನ್‌ನನ್ನು ನಾನು ಇದಕ್ಕಿಂತ ಎಲ್ಲಿಯೂ ನೋಡಿಲ್ಲ.

2. ಸುಮಾರು 1 ವರ್ಷದ ಹಿಂದೆ ನಾನು ರಾಮನಗರದ ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಅಲ್ಲಿಗೆ ನನ್ನನ್ನು ಪೊಲೀಸ್ ಇನ್ಸ್ ಪೆಕ್ಟರ್ ರವರು ಕರೆಯಿಸಿದ್ದರು. ಅಲ್ಲಿಗೆ ನನ್ನನ್ನು ಚಿನ್ನ ತೂಕ ಮಾಡಿಸಲು ಕರೆಯಿಸಿದ್ದರು.

3. ನ್ಯಾಯಾಲಯದ ಮುಂದಿರುವ ಮುದ್ದೆಮಾಲು 6 ಚಿನ್ನದ ನೆಕ್‌ಲೆಸ್‌ನ್ನು ನಾನು ರಾಮನಗರ ಗ್ರಾಮಾಂತರ ಠಾಣೆಯಲ್ಲಿ

ಪರೀಕ್ಷಿಸಿದ್ದೇನೆ. ನಾನು ಪರೀಕ್ಷಿಸಿ ಅದು 20 ಗ್ರಾಂ ಚಿಲ್ಲರೆ ಇದೆ ಎಂದು ಪೊಲೀಸರಿಗೆ ತಿಳಿಸಿದ್ದೇನೆ.

4. ಈ ಸಂಬಂಧವಾಗಿ ಪೊಲೀಸರು ಈಗ ನೋಡಿದ ನಿಶಾನೆ ಪಿ 7 ಮಹಜರ್‌ಗೆ ನನ್ನ ರುಜುವನ್ನು ನಿಶಾನೆ ಪಿ 7(ಸಿ) ರಂತೆ ಪಡೆದುಕೊಂಡಿದ್ದಾರೆ. ಆ ರೀತಿ ಮಹಜರ್ ಮಾಡುವಾಗ ಮುದ್ದೆಮಾಲು 6 ಚಿನ್ನದ ನೆಕ್‌ಲೆಸ್‌ನ್ನು ಹೊರತು ಪಡಿಸಿ ಬೇರೆ ಏನನ್ನೂ ಪೊಲೀಸರು ನನಗೆ ತೋರಿಸಿಲ್ಲ.

5. ಅದೇ ರೀತಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲು 17 ಮೊಬೈಲ್‌ನ್ನು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**

6. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿದಾಗ ಅಲ್ಲಿ ನ್ಯಾಯಾಲಯದ ಮುಂದಿರುವ 1ನೇ ಆರೋಪಿ ಇದ್ದ ಎನ್ನುವುದು ಸರಿಯಲ್ಲ. ಅತ ತನ್ನ ವಶದಲ್ಲಿದ್ದ ಒಂದು ಕ್ವಾಲಿಸ್ ವಾಹನ, ನ್ಯಾಯಾಲಯದ ಮುಂದಿರುವ ಎಂ.ಓ.17 ಮೊಬೈಲ್, ರೂ.5,000/- ಮತ್ತು 25 ಗ್ರಾಂ ತೂಕದ ನೆಕ್‌ಲೆಸ್‌ನ್ನು ಹಾಜರುಪಡಿಸಿದ ಎನ್ನುವುದು

ಸರಿಯಲ್ಲ. 1 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ</u> ಶ್ರೀ.ಹೆಚ್.ಎಸ್.ಆರ್. ವಕೀಲರಿಂದ – 1 ನೇ ಆರೋಪಿ ಪರವಾಗಿಃ-**

7. ಚಿನ್ನಬೆಳ್ಳಿ ಪಾಲಿಶ್ ಮಾಡುವ ಅಂಗಡಿ ಇಟ್ಟುಕೊಳ್ಳಲು ನಾನು ಪರವಾನಗಿಯನ್ನು ಪಡೆದುಕೊಂಡಿದ್ದೇನೆ. ಆ ಪರವಾನಗಿಯನ್ನು ಪೊಲೀಸರು ನನ್ನಿಂದ ಪಡೆದುಕೊಂಡಿಲ್ಲ. ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯ ಯಾವುದೇ ಪರಕರಣಕ್ಕೆ ಸಂಬಂಧಪಟ್ಟಂತೆ ಚಿನ್ನ ಬೆಳ್ಳಿಯನ್ನು ಪರೀಕ್ಷಿಸಬೇಕಾದರೆ ಪೊಲೀಸರು ನನ್ನನ್ನೇ ಕರೆಯಿಸುತ್ತಾರೆ ಎನ್ನುವುದು ಸರಿ.

8. ಸುಮಾರು ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಲವಾರು ಆಭರಣಗಳನ್ನು ಒಂದೇ ಸಲ ಪೊಲೀಸರು ನನ್ನ ಮೂಲಕ ಪರೀಕ್ಷೆಗೆ ಒಳಪಡಿಸುತ್ತಾರೆ ಎನ್ನುವುದು ಸರಿ. ಹಲವಾರು ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಆಭರಣಗಳನ್ನು ಪರೀಕ್ಷಿಸುವುದರಿಂದ ಇಂತಹದ್ದೇ ಆಭರಣವನ್ನು ನಾನು ಪರೀಕ್ಷಿಸಿದ್ದೇನೆ ಎಂದು ನಿಖರವಾಗಿ ಈಗ ತಿಳಿಸಲು ಆಗದು ಎನ್ನುವುದು ಸರಿ.

**ಪಾಟೀಸವಾಲುಃ ಉಳಿದ ಆರೋಪಿಗಳ ಪರವಾಗಿಃ ಇರುವುದಿಲ್ಲ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.